# ಶ್ರೀ ವೇಂಕಟೇಶ ಸಚಿತ್ರ ಸುಪ್ರಭಾತ

(ಸುಪ್ರಭಾತ, ಸ್ತೋತ್ರ, ಪ್ರಪತ್ತಿ, ಮಂಗಳಾಶಾಸನಮ್)

**ತಿರುಮಲ ತಿರುಪತಿ ದೇವಸ್ಥಾನಗಳು**

**ತಿರುಪತಿ**

**2023**

# SRI VENKATESWARA SACHITRA SUPRABHATHAM (KANNADA)

**(SUPRABHATAM, STOTRAM, PRAPATTI AND MANGALASASANAM WITH COMMENTARY)**

T.T.D. Religious Publications Series No.1448
©All Rights Reserved

First Edition : 2023

Copies : 5000

Published by
**Sri A.V. Dharma Reddy,** IDES
Executive Officer,
Tirumala Tirupati Devasthanams,
Tirupati.

D.T.P:
Publications Division,
T.T.D, Tirupati.

Printed at :
Tirumala Tirupati Devasthanams Press,
Tirupati.

## FOREWORD

Sri Venkateswara or Balaji is the Saviour of Kaliyuga. The devotees have immense belief in Lord Venkateswara. The God in return showers boons on His devotees, as per their desires. The devotees praise the Lord's excellence, His beauty, qualities and his spiritual powers in various ways.

Sri Venkateswara Suprabhatam comprises four parts: Suprabhatam, Stotram, Prapatti and Mangalasasanam. According to Hindu rituals, Lord Venkateswara is put to bed every night. This service to God is termed Ekanta Seva. Suprabhatam is the hymn recited every morning to wake up the Lord. During this service, devotees praise Lord Srinivasa and submissively request Him to wake up and bless the devotees who eagerly wait to seek His blessings. The next stage is presenting the Stotra in praise of the Lord. Here, the devotees describe the pious qualities and glory of the God's chaitanya (kinetic) form. This is followed by the Prapatti wherein devotees surrender themselves to Him. The devotees' faith in God is such that they believe Lord Venkateswara to be the only God who will protect them from the evils in this mundane world. The final part is Mangalasasanam: here too the devotees show their respect and divine feelings to Him. As a part of this, a piece of camphor is lit and offered to the Lord (termed 'Harati').


The Tirumala Tirupati Devasthanam, Tirupati is publishing the book titled **"Sri Venkateswara Suprabhatam - Pictorial"** in 5 different languages - Telugu, English, Hindi, Tamil and Kannada so that it would reach a wider audience. The slokas follow in line one after the other, along with summaries to each of them, which can be easily comprehended. Besides this, it has beautiful pictures which will delight the readers. It is felt that every reader will be spiritually enlightened by reciting the slokas every morning.

In the Service of Lord Venkateswara

**Executive Officer**

Tirumala Tirupati Devasthanams
Tirupati.


A·SEENU
BOMBAY.


A. SEENU

# ಶ್ರೀ ವೇಂಕಟೇಶ ಸುಪ್ರಭಾತ


**ಕೌಸಲ್ಯಾ ಸುಪ್ರಜಾರಾಮ !**

**ಪೂರ್ವಾ ಸಂಧ್ಯಾ ಪ್ರವರ್ತತೇ ।**

**ಉತ್ತಿಷ್ಠ ನರಶಾರ್ದೂಲ**

**ಕರ್ತವ್ಯಂ ದೈವಮಾಹ್ನಿಕಮ್ ॥ 1 ॥**

ಕೌಸಲ್ಯೆಯು ಸುಪುತ್ರವತಿ; ಪುರುಷಶ್ರೇಷ್ಠನಾದ ಎಲೈ ರಾಮ! ಇದೋ ಪೂರ್ವ ಸಂಧ್ಯೆಯು ಪ್ರಾದುರ್ಭವಿಸುತ್ತಿದೆ; ಏಳೆಲೌ - ನರಶ್ರೇಷ್ಠ! ದೇವಸಂಬಂಧಿಯಾದ ಆಹ್ನಿಕವು ಅನುಷ್ಠೇಯವಾಗಿದೆ.


S.P.1

**ಉತ್ತಿಷ್ಠೋತ್ತಿಷ್ಠ ಗೋವಿಂದ**
**ಉತ್ತಿಷ್ಠ ಗರುಡಧ್ವಜ।**
**ಉತ್ತಿಷ್ಠ ಕಮಲಾಕಾಂತ!**
**ತ್ರೈಲೋಕ್ಯಂ ಮಂಗಳಂ ಕುರು ॥ 2 ॥**

ಗೋವಿಂದನೇ ಏಳು; ಗರುಡಧ್ವಜನೇ ಏಳು; ಕಮಲಾಕಾಂತನೇ ಏಳು; ಮೂರು ಲೋಕಗಳನ್ನು ಮಂಗಳಯುತವಾಗಿ ಮಾಡು.


A.SEENU
S.P.2

**ಮಾತ  ಸ್ಸಮಸ್ತಜಗತಾಂ ಮಧುಕೈಟಭಾರೇಃ ।**
**ವಕ್ಷೋವಿಹಾರಿಣಿ ಮನೋಹರ ದಿವ್ಯಮೂರ್ತೇ ॥**
**ಶ್ರೀ ಸ್ವಾಮಿನಿ ಶ್ರಿತ ಜನಪ್ರಿಯದಾನಶೀಲೇ ।**
**ಶ್ರೀವೆಂಕಟೇಶದಯಿತೇ ತವ ಸುಪ್ರಭಾತಮ್ ॥ 3 ॥**

ಸಮಸ್ತ ಲೋಕಗಳಿಗೂ ಮಾತೆಯೂ, ಮಧುಕೈಟಭರೆಂಬ ದಾನವರನ್ನು ಮರ್ದಿಸಿದ ದಾನವಾರಿಯ ಎದೆಯಲ್ಲಿ ವಿಹರಿಸು ವವಳೂ, ಮನೋಹರ ದಿವ್ಯಸ್ವರೂಪವುಳ್ಳವಳೂ,ಆಶ್ರಿತರಿಗೆ ಪ್ರಿಯವಾದುದನ್ನು ಕೊಡುವ ಸ್ವಭಾವವುಳ್ಳವಳೂ, ಶ್ರೀ ವೇಂಕಟೇಶನ ಪ್ರಿಯತಮೆಯೂ ಆದ ಎಲೌ ಶ್ರೀದೇವಿ! ನಿನಗೆ ಸುಪ್ರಭಾತವು.


S.P.3
A.S

**ತವ ಸುಪ್ರಭಾತ ಮರವಿಂದಲೋಚನೇ।**

**ಭವತು ಪ್ರಸನ್ನ ಮುಖಚಂದ್ರಮಂಡಲೇ॥**

**ವಿಧಿಶಂಕರೇಂದ್ರ ವನಿತಾಭಿರರ್ಚಿತೇ।**


**ವೃಷಶೈಲನಾಥ ದಯಿತೇ ದಯಾನಿಧೇ ॥4॥**

ಈ ಪದ್ಯದಲ್ಲಿಯೂ ಭಕ್ತನು ಶ್ರೀದೇವಿಯ ಗುಣಗಳನ್ನು ವರ್ಣಿಸುತ್ತಾ ಹೀಗೆ ಹೇಳುವನು; ಅರವಿಂದಲೋಚನಳೂ,ಚಂದ್ರಮಂಡಲ ದಂತಿರುವ ಪ್ರಸನ್ನವಾದ ಮುಖವುಳ್ಳವಳೂ,ಬ್ರಹ್ಮ,ಶಂಕರ,ಇಂದ್ರನೇ ಮೊದಲಾದವರ ಪತ್ನಿಯರಿಂದ ವಂದಿತಳೂ ವೃಷಶೈಲನಾಥನ (ಶ್ರೀ ವೇಂಕಟೇಶನ) ಪ್ರಿಯತಮೆಯೂ, ದಯಾನಿಧಿಯೂ  ಆದ ಎಲೌ ಶ್ರೀದೇವಿಯೇ! ನಿನಗೆ ಸುಪ್ರಭಾತವಾಗಲಿ.


S.P.4
A.S

**ಅತ್ರ್ಯಾದಿ ಸಪ್ತ ಋಷಯಸ್ಸಮುಪಾಸ್ಯ ಸಂಧ್ಯಾಂ ।**
**ಆಕಾಶ ಸಿಂಧುಕಮಲಾನಿ ಮನೋಹರಾಣಿ ॥**
**ಆದಾಯ ಪಾದಯುಗ ಮರ್ಚಯಿತಂ ಪ್ರಪನ್ನಾಃ ।**
**ಶೇಷಾದ್ರಿಶೇಖರವಿಭೋ ! ತವ ಸುಪ್ರಭಾತಮ್ ॥ 5 ॥**

ಜಗನ್ಮಾತೆಯಾದ ಶ್ರೀದೇವಿಯನ್ನು ಸುಪ್ರಭಾತದಿಂದ ಪ್ರಾರ್ಥಿಸಿ,ಇಲ್ಲಿಂದ ಮುಂದೆ ಶ್ರೀವೇಂಕಟೇಶನನ್ನು ಸುಪ್ರಭಾತದಿಂದ ಭಕ್ತನು ಪ್ರಾರ್ಥಿಸುತ್ತಾನೆ. ಶೇಷಾದ್ರಿಗೆ ಶಿರೋಭೂಷಣನೂ, ಪ್ರಭುವೂ ಆದ ಎಲೈ ವೇಂಕಟೇಶನೇ! ಅತ್ರಿಯೇ ಮೊದಲಾದ ಸಪ್ತರ್ಷಿಗಳು ಪ್ರಾತಸ್ಸಂಧ್ಯೆಯ ಉಪಾಸನೆಯನ್ನು ಮಾಡಿ,ಮನೋಹರವಾದ ಆಕಾಶಗಂಗೆಯ ಕಮಲಗಳನ್ನು ತಂದು ನಿನ್ನ ಪಾದಯುಗ್ಮವನ್ನು ಅರ್ಚಿಸಲು ಬಂದಿರುವರು. ಆದ್ದರಿಂದ ನಿನಗೆ ಸುಪ್ರಭಾತವಾಗಲಿ.


A.S.
S.P.5


**ಪಂಚಾನನಾಬ್ಜ ಭವಷಣ್ಮುಖವಾಸವಾದ್ಯಾ ।**

**ತ್ರೈವಿಕ್ರಮಾದಿಚರಿತಂ ವಿಬುಧಾಃ ಸ್ತುವಂತಿ ॥**

**ಭಾಷಾಪತಿಃ ಪಠತಿ ವಾಸರಶುದ್ಧಿ ಮಾರಾತ್ ।**

**ಶೇಷಾದ್ರಿಶೇಖರವಿಭೋ ! ತವ ಸುಪ್ರಭಾತಮ್ ॥ 6 ॥**

ಶಂಕರ, ಬ್ರಹ್ಮ, ಷಣ್ಮುಖ, ಇಂದ್ರನೇ ಮೊದಲಾದ ದೇವತೆಗಳು ತ್ರಿವಿಕ್ರಮಾವತಾರದ ಕಥೆಯೇ ಮೊದಲಾದ ನಿನ್ನ ಚರಿತೆಯನ್ನು ಹಾಡಿ ಹೊಗಳುತ್ತಿದ್ದಾರೆ. ವಾಕ್ಪತಿಯಾದ ಬೃಹಸ್ಪತಿಯು ದಿನ ಶುದ್ಧಿಯನ್ನು ಈಗಲೇ ಪಠಿಸುತ್ತಿದ್ದಾನೆ. ಶೇಷಾದ್ರಿಶೇಖರವಿಭೋ ! ನಿನಗೆ ಸುಪ್ರಭಾತವು.


A.SEENU.
S.P.6

**ಈಷತ್ಪ್ರ ಫುಲ್ಲ ಸರಸೀರುಹ ನಾರಿಕೇಳ ।**

**ಪೂಗದ್ರುಮಾದಿ ಸುಮನೋಹರ ಪಾಲಿಕಾನಾಮ್ ॥**

**ಆವಾತಿ ಮಂದಮನಿಲಸ್ಸಹ ದಿವ್ಯಗಂಧೈಃ ।**


**ಶೇಷಾದ್ರಿಶೇಖರವಿಭೋ ! ತವ ಸುಪ್ರಭಾತಮ್ ॥ 7 ॥**

ಈಗ ತಾನೇ ಸ್ವಲ್ಪ ಮಟ್ಟಿಗೆ ವಿಕಸಿತವಾಗಿರುವ ಕಮಲಗಳ, ಅಡಕೆ ಮೊದಲಾದವುಗಳ ಸಂಪರ್ಕವನ್ನು ಹೊಂದಿ ಸುಗಂಧ ಯುಕ್ತವಾದ ಮಾರುತವು ಮೆಲ್ಲಮೆಲ್ಲನೆ ಬೀಸುತ್ತಿದೆ, ಅಂದರೆ ಈಗ ತಾನೆ ಅರುಣೋದಯವಾಗುತ್ತಿದೆ. ಅದರ ಫಲವಾಗಿ ಹೂವುಗಳು ವಿಕಾಸಗೊಳ್ಳುತ್ತಿವೆ.ಅವುಗಳ ಮೇಲೆ ಹಾಯ್ದು ಬರುವ ಮಂದಮಾರುತವು ಹೊಸ ಚೈತನ್ಯವನ್ನುಂಟು ಮಾಡುತ್ತಿದೆ ಶೇಷಾದ್ರಿಶೇಖರ ವಿಭೋ! ನಿನಗೆ ಸುಪ್ರಭಾತವು.


S.P. 7
A.S

**ಉನ್ಮೀಲ್ಯ  ನೇತ್ರಯುಗ ಮುತ್ತಮಪಂಜರಸ್ಥಾಃ ।**
**ಪಾತ್ರಾವಶಿಷ್ಟ ಕದಲೀಫಲ ಪಾಯಸಾನೀ  ॥**
**ಭುಕ್ತ್ವಾ ಸಲೀಲ ಮಥ ಕೇಳಿಶುಕಾಃ ಪಠನ್ತಿ ।**
**ಶೇಷಾದ್ರಿಶೇಖರವಿಭೋ !  ತವ ಸುಪ್ರಭಾತಮ್ ॥ 8 ॥**

ಈಗ ತಾನೆ ಕಣ್ಣುಗಳನ್ನು ತೆರೆಯುತ್ತಿರುವ, ಪಂಜರದಲ್ಲಿ ವಿನೋದಾರ್ಥವಾಗಿ ಇರುವ ಗಿಳಿಗಳು ರಾತ್ರಿಯಲ್ಲಿ ಅವುಗಳ  ಆಹಾರ ಕ್ಕಾಗಿ ಪಾತ್ರೆಗಳಲ್ಲಿ ಇಟ್ಟು ರಾತ್ರಿಯೇ ತಿಂದು ಉಳಿಸಿರುವ ಬಾಳೆಯ ಹಣ್ಣು, ಪಾಯಸ ಮೊದಲಾದವನ್ನು ತಿಂದು ಸಂತೋಷದಿಂದ ಹಾಡುತ್ತಿವೆ. ಶೇಷಾದ್ರಿಶೇಖರವಿಭೋ! ನಿನಗೆ ಸುಪ್ರಭಾತವು.


A.S
S.P. 8


**ತಂತ್ರೀಪ್ರಕರ್ಷ ಮಧುರಸ್ವನಯಾ ವಿಪಂಚ್ಯಾ ।**

**ಗಾಯತ್ಯನಂತ ಚರಿತಂ ತವ ನಾರದೋಽಪಿ ॥**

**ಭಾಷಾ ಸಮಗ್ರ ಮಸಕೃತ್ಕರಚಾರುರಮ್ಯಂ ।**

**ಶೇಷಾದ್ರಿಶೇಖರವಿಭೋ ! ತವ ಸುಪ್ರಭಾತಮ್ ॥ ೯ ॥**

ದೇವರ್ಷಿಯಾದ ನಾರದನು ಶ್ರೇಷ್ಠವಾದ ತಂತಿಗಳಿರುವ ಮಧುರವಾದ ಧ್ವನಿಯನ್ನು ಕೊಡುವ "ಮಹತಿ" ಯೆಂಬ ತನ್ನ ವೀಣೆಯನ್ನು ನುಡಿಸುತ್ತ ತನ್ನ ವೀಣಾವಾದನ ಚಮತ್ಕಾರವನ್ನು ತೋರಿಸುವ ಭಾಷೆಯಿಂದ ಸಮಗ್ರವಾದ ನಿನ್ನ ಚರಿತ್ರೆಯನ್ನು ಹಾಡುತ್ತಿರುವನು. ಶೇಷಾದ್ರಿಶೇಖರವಿಭೋ! ನಿನಗೆ ಸುಪ್ರಭಾತವು.


S.P. 9
A.S

**ಭೃಂಗಾವಲೀ ಚ ಮಕರಂದರಸಾನುವಿದ್ಧ ।**

**ಝುಂಕಾರಗೀತನಿನದೈಸ್ಸಹ ಸೇವನಾಯ ॥**

**ನಿರ್ಯಾತ್ಯು ಪಾಂತ ಸರಸೀಕಮಲೋದರೇಭ್ಯಃ ।**

**ಶೇಷಾದ್ರಿಶೇಖರವಿಭೋ ! ತವ ಸುಪ್ರಭಾತಮ್ ॥ 10 ॥**

ಸಂಜೆಯ ಹೊತ್ತಿನಲ್ಲಿ ಪುಷ್ಪರಸವನ್ನು ಕುಡಿಯುತ್ತ ಕಮಲದೊಳಗೆ ಸೇರಿ ಹೋಗಿದ್ದ (ಸೂರ್ಯಾಸ್ತವಾಗಲು ಕಮಲವು ಮುಚ್ಚಿಕೊಳ್ಳುವುದರಿಂದ) ದುಂಬಿ ಎಂದು, ಈಗ ಸೂರ್ಯೋದಯವಾಗುತ್ತಿರಲು ಮಕರಂದ (ಪುಷ್ಪರಸ) ದೊಡನೆಯೇ ಝೇಂಕಾರ ರೂಪವಾದ ಗೀತಧ್ವನಿಗೈಯುತ್ತಾ ಕಮಲದ ಒಳಭಾಗದಿಂದ ನಿನ್ನ ಸೇವೆಗಾಗಿ ಇದೋ ಹೊರಬರುತ್ತಿವೆ. ಶೇಷಾದ್ರಿಶೇಖರವಿಭೋ! ನಿನಗೆ ಸುಪ್ರಭಾತವು.


S.P.10

**ಯೋಷಾಗಣೇನ ವರಧಧ್ನಿ ವಿಮಥ್ಯಮಾನೇ ।**

**ಘೋಷಾಲಯೇಷು ದಧಿಮಂಥನ ತೀವ್ರ ಘೋಷಾಃ ॥**

**ರೋಷಾತ್ಕಲಿಂ ವಿದಧತೇ ಕಕುಭಶ್ಚ ಕುಂಭಾಃ ।**

**ಶೇಷಾದ್ರಿಶೇಖರವಿಭೋ ! ತವ ಸುಪ್ರಭಾತಮ್ ॥ 11 ॥**

ಗೊಲ್ಲರ ಮನೆಯಲ್ಲಿ ಸ್ತ್ರೀಯರು ಹೆಪ್ಪು ಹಾಕಿದ ಗಟ್ಟಿ ಮೊಸರನ್ನು ಕಡೆಯುತ್ತಿದ್ದರೆ, ಅದರಿಂದ ಉಂಟಾದ ಶಬ್ಧದಿಂದಾಗಿ - ಮೊಸರನ್ನು ಕಡೆಯುವ ಕುಂಭಗಳು ದಿಕ್ಕುಗಳೊಡನೆ ಕೋಪದಿಂದ ಗುಡುಗಿ ಗರ್ಜಿಸುತ್ತಿರುವ ಭ್ರಾಂತಿಯನ್ನುಂಟು ಮಾಡುತ್ತಿದೆ. ಪರಸ್ಪರ ಜಗಳವಾಡುತ್ತಿರುವಂತಿದೆ ಎಂದರೆ, ಆಗತ್ತಾನೆ ಅರುಣೋದಯವಾಗುತ್ತಿರುವುದರಿಂದ ಎಲ್ಲೆಲ್ಲೂ ನಿಶ್ಯಬ್ದವು ಹರಡಿದೆ. ಅಂತಹ ಸಮಯದಲ್ಲಿ ಮೊಸರನ್ನು ಭಾರಿ ಭಾರಿ ಮಡಕೆಗಳಲ್ಲಿ ಕಡೆಯುವುದರಿಂದ ಅದರ ಶಬ್ದವು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುತ್ತದೆ. ಶೇಷಾದ್ರಿಶೇಖರವಿಭೋ ! ನಿನಗೆ ಸುಪ್ರಭಾತವು.



**ಪದ್ಮೇಶಮಿತ್ರಶತಪತ್ರ ಗತಾಳಿವರ್ಗಾಃ ।**
**ಹರ್ತುಂ ಶ್ರಿಯಂ ಕುವಲಯಸ್ಯ ನಿಜಾಂಗಲಕ್ಷ್ಮ್ಯಾ ॥**
**ಭೇರಿ ನಿನಾದಮಿವ ಬಿಭ್ರತಿ ತೀವ್ರನಾದಂ ।**
**ಶೇಷಾದ್ರಿಶೇಖರವಿಭೋ ! ತವ ಸುಪ್ರಭಾತಮ್ ॥ 12 ॥**

ಕಮಲದೊಳಗೆ ಸೇರಿದ್ದು ಹೊರಗೆ ಬರುತ್ತಿರುವ ದುಂಬಿಗಳ ಸಮೂಹಗಳು ತಮ್ಮ ದೇಹಕಾಂತಿಯಿಂದ ಕನ್ನೈದಿಲೆಯ ಶ್ರೀಯನ್ನು (ಐಶ್ವರ್ಯವನ್ನು ಮತ್ತು ಕಾಂತಿಯನ್ನು) ಅಪಹರಿಸಲು ರಣಭೇರಿಯಂತೆ ತೀವ್ರವಾಗಿ ಝೇಂಕರಿಸುತ್ತಿವೆ, ಎಂದರೆ ಸ್ವಾಭಾವಿಕವಾಗಿ ದುಂಬಿಗಳು ಬೆಳಗಾಗುತ್ತಲೇ ಝೇಂಕರಿಸುತ್ತ ಹಾರಾಡುತ್ತಿರುತ್ತವೆ. ಬೆಳಗಾಗುತ್ತಲೇ ನೈದಿಲೆಯು ಮುಚ್ಚಿಕೊಳ್ಳುತ್ತದೆ. ಕಮಲವು ವಿಕಾಸಗೊಳ್ಳುತ್ತದೆ. ಅದರಿಂದ ಕಮಲದೊಳಗಿರುವ ದುಂಬಿಗಳು ಸ್ವಾಭಾವಿಕವಾದ ಕಪ್ಪು ದೇಹದ ಕಾಂತಿಯಿಂದ ಮುಚ್ಚಿಹೋಗು ತ್ತಲಿರುವ ನೈದಿಲೆಯನ್ನು (ಅದೂ ಕಪ್ಪಾಗಿರುವುದರಿಂದ) ಸೋಲಿಸಿ ಜಯಭೇರಿಯನ್ನು ಮೊಳಗಿಸುತ್ತಿವೆಯೋ ಎಂಬಂತಿವೆ. ಶೇಷಾದ್ರಿ ಶೇಖರವಿಭೋ! ನಿನಗೆ ಸುಪ್ರಭಾತವು.


S.P.12


**ಶ್ರೀಮನ್ನಭೀಷ್ಟ ವರದಾಖಿಲಲೋಕಬಂಧೋ ।**
**ಶ್ರೀ ಶ್ರೀನಿವಾಸ ಜಗದೇಕ ದಯೈಕಸಿಂಧೋಃ ॥**
**ಶ್ರೀ ದೇವತಾಗೃಹಭುಜಾಂತರ ದಿವ್ಯಮೂರ್ತೇ ।**
**ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 13 ॥**

ಶ್ರೀದೇವಿ ನಿತ್ಯಯೋಗವುಳ್ಳವನೂ, ಭಕ್ತರಿಗೆ ಅವರ ಇಷ್ಟ ಫಲ ಪ್ರದಾತನೂ, ಅಖಿಲಲೋಕ ಬಂಧುವೂ, ಜಗತ್ತಿಗೆ ಏಕಮಾತ್ರ ಕರುಣಾ ಸಮುದ್ರನೂ, ಶ್ರೀದೇವಿಗೆ ನಿತ್ಯ ವಾಸಸ್ಥಾನವಾದ ಎದೆಯುಳ್ಳವನೂ, ದಿವ್ಯಮಂಗಳ ಮೂರ್ತಿಯೂ, ಶ್ರೀ ವೇಂಕಟಾಚಲ ಪತಿಯೂ ಆದ ಶ್ರೀ ಶ್ರೀನಿವಾಸ ! ನಿನಗೆ ಸುಪ್ರಭಾತವು.


S.P. 13
A.S

**ಶ್ರೀಸ್ವಾಮಿ ಪುಷ್ಕರಿಣಿಕಾಽಽ ಪ್ಲವ ನಿರ್ಮಲಾಂಗಾಃ ।**
**ಶ್ರೇಯೋಽರ್ಥಿನೋ ಹರವಿರಿಂಚಸನಂದನಾದ್ಯಾಃ ॥**
**ದ್ವಾರೇ ವಸಂತಿ ವರವೇತ್ರ ಹತೋತ್ತಮಾಂಗಾಃ ।**
**ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 14 ॥**

ಶ್ರೀ ಸ್ವಾಮಿ ಪುಷ್ಕರಿಣೀ ತೀರ್ಥದಲ್ಲಿ ಸ್ನಾನ ಮಾಡಿ ಪರಿಶುದ್ಧರಾಗಿರುವ ಶಿವ, ಬ್ರಹ್ಮ, ಸನಕ, ಸನಂದನರೇ ಮೊದಲಾದವರು ಶ್ರೇಯಃಕಾಂಕ್ಷಿಗಳಾಗಿ ನಾನು ಮೊದಲು ನಾನು ಮೊದಲೆಂದು ನಿನ್ನ ಬಾಗಿಲ ಬಳಿಗೆ ಬರುತ್ತಿರಲು ಅಲ್ಲಿನ ದ್ವಾರಪಾಲಕರು ತಮ್ಮ ಕೈಯಲ್ಲಿರುವ ಬೆತ್ತದಿಂದ ತಡೆಯುತ್ತಲಿರುವರು.ಅಂತಹ ಶ್ರೇಯೋಭಿಲಾಷಿಗಳಾದ ಹರಾದಿ ದೇವೋತ್ತಮರ ಗತಿಯೇ ಹೀಗಿರುವಾಗ ನಮ್ಮಂತಹವರ ಗತಿಯೇನು? ಎಲೌ ವೇಂಕಟಾಚಲಪತೇ! ನಿನಗೆ ಸುಪ್ರಭಾತವು.


S.P.14
A.SEENU.


**ಶ್ರೀ ಶೇಷಶೈಲ ಗರುಡಾಚಲ ವೆಂಕಟಾದ್ರಿ ।**
**ನಾರಾಯಣಾದ್ರಿ ವೃಷಾಭಾದ್ರಿ ವೃಷಾದ್ರಿಮುಖ್ಯಾನ್ ॥**
**ಆಖ್ಯಾಂ ತ್ವದೀಯವಸತೇರನಿಶಂ ವದಂತಿ ।**
**ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 15 ॥**

ಶ್ರೀ ವೇಂಕಟಾಚಲಪತೇ! ನಿನ್ನ ವಾಸಸ್ಥಾನವನ್ನು ಶ್ರೀ ಶೇಷಶೈಲವೆಂದೂ,ಗರುಡಾಚಲವೆಂದೂ, ವೆಂಕಟಾದ್ರಿ ಎಂದೂ, ನಾರಾಯಣಾದ್ರಿ ಎಂದೂ, ವೃಷಭಾದ್ರಿ ಎಂದೂ, ವೃಷಾದ್ರಿ ಎಂದೂ ಅನೇಕ ನಾಮಧೇಯಗಳಿಂದ ಕೀರ್ತಿಸುತ್ತಿರುವರು. ಅಂತಹ ಅನಂತ ನಾಮಧೇಯಗಳಿಗೆ ಕಾರಣನಾದ ಮಹಾ ಮಹಿಮನೇ ! ನಿನಗೆ ಸುಪ್ರಭಾತವು!


S.P.15
એ.સાનુ

**ಸೇವಾಪರಾಶ್ಶಿವಸುರೇಶಕೃಶಾನುಧರ್ಮ -**
**ರಕ್ಷೋಂಬುನಾಥ ಪವಮಾನ ಧನಾಧಿನಾಥಾಃ ॥**
**ಬದ್ಧಾಂಜಲಿ ಪ್ರವಿಲಸನ್ನಿಜಶೀರ್ಷದೇಶಾಃ ।**
**ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 16 ॥**

ಸೇವಾಪರರಾದ ಶಿವ, ಇಂದ್ರ, ಅಗ್ನಿ,ಯಮ, ವರುಣ, ವಾಯುದೇವ, ಕುಬೇರನೇ ಮೊದಲಾದವರು ಅಂಜಲೀಬಂಧದಿಂದ ಶೋಭಿಸುವ ತಲೆಯುಳ್ಳವರಾಗಿ ನಿನ್ನ ದರ್ಶನವನ್ನು ನಿರೀಕ್ಷಿಸುತ್ತಿದ್ದಾರೆ. ಆದುದರಿಂದ ಶ್ರೀ ವೇಂಕಟಾಚಲಪತೇ, ನಿನಗೆ ಸುಪ್ರಭಾತವು.


A.S
S.P.16

**ಧಾಟೀಷು ತೇ ವಿಹಗರಾಜ ಮೃಗಾಧಿರಾಜ -**

**ನಾಗಾಧಿರಾಜ ಗಜರಾಜ ಹಯಾಧಿರಾಜಾಃ ॥**

**ಸ್ವಸ್ವಾಧಿಕಾರ ಮಹಿಮಾದಿಕಮರ್ಥಯಂತೇ ।**

**ಶ್ರೀ ವೇಂಕಟಾಚಲಪತೇ! ತವ ಸುಪ್ರಭಾತಮ್ ॥ 17 ॥**

ಶ್ರೀ ವೇಂಕಟಾಚಲಪತೇ! ಇದೋ ಬೆಳಗಾಗುತ್ತಿರುವಂತೆಯೇ ಪಶುಶಾಲೆಯಲ್ಲಿಯೂ, ಮೃಗಾಲಯದಲ್ಲಿಯೂ ಪಶುಪಾಲಕರು ತಮ್ಮ ತಮ್ಮ ಅಧಿಕಾರವೇ ಮೊದಲಾದುವನ್ನು ನಿನ್ನಿಂದ ಪ್ರಾರ್ಥಿಸುತ್ತಿರುವರು. ಆದುದರಿಂದ ನಿನಗೆ ಸುಪ್ರಭಾತವಾಗಲಿ.


S.P.17


**ಸೂರ್ಯೇಂದುಭೌಮ ಬುಧವಾಕ್ಪತಿ ಕಾವ್ಯಸೌರಿ - ।**
**ಸ್ವರ್ಭಾನುಕೇತು ದಿವಿಷತ್ಪರಿಷತ್ಪ್ರಧಾನಾಃ ॥**
**ತ್ವದ್ದಾಸದಾಸ ಚರಮಾವಧಿದಾಸ ದಾಸಾಃ ।**
**ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 18 ॥**

ಸೂರ್ಯನೇ ಮೊದಲಾದ ನವಗ್ರಹಾದಿ ದೇವತೆಗಳೂ ದೇವತೆಗಳ ಪ್ರಮುಖರೂ ನಿನ್ನ ಸೇವಾಪರರಾದ ದಾಸಾನುದಾಸರ ದಾಸರಾಗಿ ನಿನ್ನ ಸೇವೆ ಮಾಡಲು ನಿರೀಕ್ಷಿಸುತ್ತಿರುವರು. ಎಲೆಲೌ! ಶ್ರೀ ವೇಂಕಟಾಚಲಪತೇ! ನಿನಗೆ ಸುಪ್ರಭಾತವಾಗಲಿ.


S.P. 18
ए.सीनु


ತ್ವತ್ಪಾದಧೂಳಿಭರಿತ ಸ್ಫುರಿತೋತ್ತಮಾಂಗಾಃ ।
ಸ್ವರ್ಗಾಪವರ್ಗ ನಿರಪೇಕ್ಷ ನಿಜಾಂತರಂಗಾಃ ॥
ಕಲ್ಪಾಗಮಾಽಽಕಲನಯಾಽಽಕುಲತಾಂ ಲಭಂತೇ ।
ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾಮ್ ॥ 19 ॥

ಚೇತನರು ಪವಿತ್ರವಾದ ನಿನ್ನ ಪಾದಧೂಳಿಯಿಂದ ಅಲಂಕರಿಸಿದ ತಲೆಯುಳ್ಳವರಾಗಿ ಸ್ವರ್ಗವನ್ನಾಗಲೀ, ಮೋಕ್ಷವನ್ನಾಗಲೀ ತೃಣೀಕರಿಸಿರುತ್ತಾರೆ, ಅಷ್ಟು ಮಾತ್ರವಲ್ಲ. ಈ ಕಲ್ಪಾಂತದ ವ್ಯಾಕುಲತೆಯನ್ನು ತಪ್ಪಿಸಿ, ದಿವ್ಯದರ್ಶನವನ್ನು ಕೊಡಲು ನಿನಗೆ ಸುಪ್ರಭಾತ ವಾಗಲಿ.


S.P.19
A.S.


ತ್ವದ್ಗೋಪುರಾಗ್ರ ಶಿಖರಾಣಿ ನಿರೀಕ್ಷಮಾಣಾಃ ।
ಸ್ವರ್ಗಾಪವರ್ಗಪದವೀಂ ಪರಮಾಂ ಶ್ರಯಂತಃ ॥
ಮರ್ತ್ಯಾ ಮನುಷ್ಯಭುವನೇ ಮತಿಮಾಶ್ರಯಂತೇ ।
ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 20 ॥

ಈ ಭೂಲೋಕದಲ್ಲಿಯೇ ಮನುಷ್ಯರು ನಿನ್ನ ಆಲಯದ ಗೋಪುರ ಶಿಖರವನ್ನು ನೋಡುತ್ತಲೇ ಸ್ವರ್ಗ ಮೋಕ್ಷಗಳ ಭಾವನೆಯನ್ನು ಹೊಂದಿರುತ್ತಾರೆ.


S.P. 20
A.S.

**ಶ್ರೀ ಭೂಮಿನಾಯಕ ದಯಾದಿಗುಣಾಮೃತಾಬ್ಧೇ ।**
**ದೇವಾದಿದೇವ ಜಗದೇಕ ಶರಣ್ಯಮೂರ್ತೇ ॥**
**ಶ್ರೀಮನ್ನನಂತ ಗರುಡಾದಿಭಿರರ್ಚಿತಾಂಘ್ರೇ ।**
**ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 21 ॥**

ಶ್ರೀದೇವಿ ಮತ್ತು ಭೂದೇವಿಯರ ಪತಿಯೂ,ದಯೆ ಮೊದಲಾದ ಅಮೃತದಂತಹ ಗುಣಗಳಿಗೆ ಸಾಗರದಂತೆ ಇರುವನೂ, ದೇವಾದಿದೇವನೂ, ಜಗತ್ತಿಗೆಲ್ಲ ರಕ್ಷಕ ಮೂರ್ತಿಯೂ,ಅನಂತ, ಗರುಡ, ವಿಷ್ವಕ್ಸೇನರೇ ಮೊದಲಾದ ನಿತ್ಯಸೂರಿಗಳಿಂದ ಪೂಜಿಸಲ್ಪಟ್ಟ ಪಾದಪದ್ಮವುಳ್ಳವನೂ ಆದ ಶ್ರೀ ವೇಂಕಟಾಚಲಪತೇ! ನಿನಗೆ ಸುಪ್ರಭಾತವಾಗಲಿ.


S.P.21
AS

**ಶ್ರೀ ಪದ್ಮನಾಭ ಪುರುಷೋತ್ತಮ ವಾಸುದೇವ ।**
**ವೈಕುಂಠ ಮಾಧವ ಜನಾರ್ದನ ಚಕ್ರಪಾಣೇ ॥**
**ಶ್ರೀವತ್ಸಚಿಹ್ನ ಶರಣಾಗತ ಪಾರಿಜಾತ ।**
**ಶ್ರೀ ವೇಂಕಟಾಚಲಪತೇ ! ತವ ಸುಪ್ರಭಾಮ್ ॥ 22 ॥**

ಕಮಲವನ್ನು ನಾಭಿಯಲ್ಲಿ ಧರಿಸಿದವನೂ, ಪುರುಷರಲ್ಲಿ ಶ್ರೇಷ್ಠನೂ, ವಸುದೇವ ಪುತ್ರನಾದ ಶ್ರೀಕೃಷ್ಣನೂ, ಸರ್ವವ್ಯಾಪಿಯಾದ ವಾಸುದೇವ ಮೂರ್ತಿಯೂ, ವೈಕುಂಠನೂ, ಮಾಧವ (ಶ್ರಿಯಃಪತಿ)ನೂ,ಚಕ್ರಪಾಣಿಯೂ, ಶ್ರೀವತ್ಸದಿಂದ ಕೂಡಿದ ಅಂಕಿತ ವಕ್ಷಸ್ಥಲ ವುಳ್ಳವನೂ, ಮೊರೆ ಹೊಕ್ಕವರಿಗೆ ಪಾರಿಜಾತವೂ (ಬೇಕಾದುದನ್ನು ಕೊಡುವ ಕಲ್ಪವೃಕ್ಷ) ಆದ ಶ್ರೀ ವೇಂಕಟಾಚಲಪತೇ! ನಿನಗೆ ಸುಪ್ರಭಾತವು.



**ಕಂದರ್ಪದರ್ಪಹರ ಸುಂದರ ದಿವ್ಯಮೂರ್ತೇ ।**
**ಕಾಂತಾಕುಚಾಂಬುರುಹಕುಟ್ಮಲಲೋಲದೃಷ್ಟೇ ॥**
**ಕಲ್ಯಾಣ ನಿರ್ಮಲಗುಣಾಕರ ದಿವ್ಯಕೀರ್ತೇ ।**
**ಶ್ರೀವೇಂಕಟಾಚಲಪತೇ ! ತವ ಸುಪ್ರಭಾಮ್ ॥ 23 ॥**

ರೂಪದಲ್ಲಿ ಅಸದೃಶನೆನಿಸಿಕೊಂಡಿರುವ ಮನ್ಮಥನ ದರ್ಪವನ್ನು ಪುಡಿಪುಡಿ ಮಾಡುವಂತಹ ಅತಿಶಯ ಸುಂದರವೂ, ದಿವ್ಯವೂ ಮಂಗಳವೂ ಆದ ಮೂರ್ತಿಯುಳ್ಳವನೂ, ಕಾಂತೆಯಾದ ಶ್ರೀದೇವಿಯ ಕಮಲದ ಮೊಗ್ಗಿನಂತಹ ಕುಚಗಳಲ್ಲಿ, ಆಸಕ್ತ ದೃಷ್ಟಿಯುಳ್ಳ ವನೂ, ಪರಿಶುದ್ಧವಾದ ಸಮಸ್ತ ಕಲ್ಯಾಣ ಗುಣಾಕಾರನೂ, ದಿವ್ಯ ಕೀರ್ತಿಯುಳ್ಳವನೂ ಆದ ಶ್ರೀ ವೇಂಕಟಾಚಲಪತೇ ! ನಿನಗೆ ಸುಪ್ರಭಾತವು.


S.P. 23
A. SEENU

**ಮೀನಾಕೃತೇ ! ಕಮಠ! ಕೋಲ! ನೃಸಿಂಹ! ವರ್ಣಿನ್ ।**
**ಸ್ವಾಮಿನ್ ಪರಶ್ವಥ ತಪೋಧನ! ರಾಮಚಂದ್ರ ॥**
**ಶೇಷಾಂಶರಾಮ! ಯದುನಂದನ !ಕಲ್ಕಿರೂಪ ।**
**ಶ್ರೀವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 24 ॥**

ಪೀಡಿತರಾದ ಸಜ್ಜನರ ಮೊರೆಯನ್ನು ಕೇಳಿ, ಪರಮ ಕರುಣೆಯಿಂದ ಕೂಡಿ, ದುಷ್ಟ ಶಿಕ್ಷಣಕ್ಕಾಗಿಯೂ, ಶಿಷ್ಟ ಪರಿಪಾಲನೆಗಾಗಿಯೂ ಆಯಾ ಕಾಲಗಳಲ್ಲಿ ಮೀನಿನ ಆಕೃತಿಯುಳ್ಳವನಾಗಿಯೂ, (ವೇದೋದ್ಧಾರಕ್ಕಾಗಿ) ಆಮೆಯಾಗಿಯೂ, ವರಾಹಮೂರ್ತಿಯಾಗಿಯೂ, ಭಕ್ತವತ್ಸಲನಾದ ನರಸಿಂಹನಾಗಿಯೂ, ಬಲಿಭಂಜಕನಾದ ವಾಮನನಾಗಿಯೂ, ದುಷ್ಟ ಕ್ಷತ್ರಿಯ ದಮನನಾದ ಪರಶುರಾಮ ನಾಗಿಯೂ, ವಾಂಛಿತ ಫಲಪ್ರದಾತನಾದ ಶ್ರೀರಾಮಚಂದ್ರಮೂರ್ತಿಯಾಗಿಯೂ, ದುಷ್ಟರೆಂಬ ಗಜಗಳಿಗೆ ಸಿಂಹಪ್ರಾಯನಾದ ಶೇಷಾಂಶ ಸಂಭೂತನಾದ ಬಲರಾಮನಾಗಿಯೂ,"ಪುಂಸಾಂ ಮೋಹನರೂಪ"ನಾದ ಶ್ರೀಕೃಷ್ಣನಾಗಿಯೂ, ಮುಂದೆ ಅವತರಿಸುವ ಮ್ಲೇಚ್ಚರನ್ನೂ ಮೂರ್ಛೆಗೊಳಿಸುವ ಕಲ್ಕಿರೂಪನಾಗಿಯೂ, ಇನ್ನೂ ಅನೇಕ ರೂಪಗಳಲ್ಲಿ ಅವತರಿಸಿದವನೂ ಆಗಿರುವ ಶ್ರೀ ವೇಂಕಟಾಚಲಪತೇ! ನಿನಗೆ ಸುಪ್ರಭಾತವು.


ఎ. శీను
S.P.24


**ಏಲಾಲವಂಗ ಘನಸಾರಸುಗಂಧಿ  ತೀರ್ಥಂ ।**
**ದಿವ್ಯಂ ವಿಯತ್ಸರಿತಿ ಹೇಮಘಟೇಷು ಪೂರ್ಣಮ್ ॥**
**ಧೃತ್ವಾಽದ್ಯ ವೈದಿಕಶಿಖಾಮಣಯಃ ಪ್ರಹೃಷ್ಟಾ ।**
**ಸ್ತಿಷ್ಠಂತೀ  ವೇಂಕಟಪತೇ ! ತವ ಸುಪ್ರಭಾತಮ್ ॥ 25 ॥**

ಏಲಕ್ಕಿ, ಲವಂಗ,ಪಚ್ಚಕರ್ಪೂರ,ಕೇಸರಿಯೇ ಮೊದಲಾದ ಪರಿಮಳ ದ್ರವ್ಯಗಳಿಂದ ಸುಗಂಧಯುಕ್ತವೂ ದಿವ್ಯವೂ ಆದ 'ಆಕಾಶಗಂಗೆ'ಯ ತೀರ್ಥವನ್ನು ಸುವರ್ಣ ಕುಂಭಗಳಲ್ಲಿ ತುಂಬಿಕೊಂಡು ಬಂದು, ವೈದಿಕ ಶ್ರೇಷ್ಠರು ಸಂತುಷ್ಟಚಿತ್ತರಾಗಿ ನಿನ್ನ ದಿವ್ಯ ದರ್ಶನಕ್ಕಾಗಿ ಕಾದು ನಿಂತಿರುವರು.ಆದುದರಿಂದ ಶ್ರೀ ವೆಂಕಟಾಚಲಪತೇ! ನಿನಗೆ ಸುಪ್ರಭಾತವು.


S.P.25
A.S.


**ಭಾಸ್ವಾನುದೇತಿ ವಿಕಚಾನಿ ಸರೋರುಹಾಣಿ ।**
**ಸಂಪೂರಯಂತಿ ನಿನದೈಃ ಕಕುಭೋ ವಿಹಂಗಾಃ ॥**
**ಶ್ರೀವೈಷ್ಣವಾಸ್ಸತತ ಮರ್ಥಿತ ಮಂಗಳಾಸ್ತೇ ।**
**ಧಾಮಾಶ್ರಯಂತಿ ತವ ವೇಂಕಟ ! ಸುಪ್ರಭಾತಮ್ ॥ 26 ॥**

ಸೂರ್ಯನು ಉದಿಸುತ್ತಿರುವನು, ಕಮಲಗಳು ವಿಕಾಸಗೊಳ್ಳುತ್ತಿರುವುವು; ಪಕ್ಷಿಗಳು ಕಲಕಲ ಮಧುರವಾದ ತಮ್ಮ ಧ್ವನಿಗಳಿಂದ ದಿಕ್ಕುಗಳನ್ನು ಮೊಳಗಿಸುತ್ತಿರುವವು ಶ್ರೀ ವೈಷ್ಣವರೂ ಒಂದೇ ಸಮವಾಗಿ ಮಂಗಳಾಶಾಸನ ಗೈಯುತ್ತ ನಿನ್ನ ಸೇವಾಕಾಂಕ್ಷಿಗಳಾಗಿ ಆಲಯದ ಸುವರ್ಣದ್ವಾರದಲ್ಲಿ ನಿಂತಿರುವರು. ಓ! ಶ್ರೀನಿವಾಸ ನಿನಗೆ ಸುಪ್ರಭಾತವು.


S.P. 26
A.S

**ಬ್ರಹ್ಮಾದಯ ಸ್ಸುರವರಾಸ್ಸ ಮಹರ್ಷಯಸ್ತೇ ।**
**ಸಂತಸ್ಸನಂದನ ಮುಖಾಸ್ತ್ವಥ ಯೋಗಿವರ್ಯಾಃ ॥**
**ಧಾಮಾಂತಿಕೇ ತವ ಹಿ ಮಂಗಳವಸ್ತುಹಸ್ತಾಃ ।**
**ಶ್ರೀವೇಂಕಟಾಚಲಪತೇ ! ತವ ಸುಪ್ರಭಾತಮ್ ॥ 27 ॥**

ಬ್ರಹ್ಮನೇ ಮೊದಲಾದ ದೇವಶ್ರೇಷ್ಠರೂ, ಪ್ರಸಿದ್ಧರಾದ ಮಹರ್ಷಿಗಳೂ, ಸನಕಸನಂದನಾದಿ ಯೋಗಿಗಳು ನಿನ್ನ ಆಲಯದ ಸಮೀಪದಲ್ಲಿ ಮಂಗಳ ದ್ರವ್ಯಗಳನ್ನು ತಂದು ನಿನ್ನ ಸೇವಾಕಾಂಕ್ಷಿಗಳಾಗಿ ನಿಂತಿರುವರು. ಶ್ರೀ ವೇಂಕಟಾಚಲಪತೇ! ನಿನಗೆ ಸುಪ್ರಭಾತವು.



S.P. 27
A·SEENU.

**ಲಕ್ಷ್ಮೀನಿವಾಸ ನಿರವದ್ಯ ಗುಣೈಕಸಿಂಧೋ।**
**ಸಂಸಾರ ಸಾಗರಸಮುತ್ತರಣೈಕಸೇತೋ॥**
**ವೇದಾಂತವೇದ್ಯ ನಿಜವೈಭವ ಭಕ್ತಭೋಗ್ಯ।**
**ಶ್ರೀವೇಂಕಟಾಚಲಪತೇ ! ತವ ಸುಪ್ರಭಾತಮ್॥ 28॥**

ಲಕ್ಷ್ಮಿಗೇ ನಿತ್ಯವಾಸಸ್ಥಾನವಾಗಿಯೂ, ನಿತ್ಯವೂ ನಿರ್ದಿಷ್ಟವೂ ಆದ ಸಮಸ್ತ ಕಲ್ಯಾಣಗುಣಗಳಿಗೆ ಆಕರನೂ, ಪ್ರಪಂಚವೆಂಬ ಮಹಾಸಾಗರವನ್ನು ದಾಟುವುದರಲ್ಲಿ ಅದ್ವಿತೀಯವಾದ ಸೇತುವೆಯೂ,ವೇದಾಂತಗಳಿಂದ ತಿಳಿಯಲ್ಪಡುವ ವೈಭವವುಳ್ಳವನೂ, ಭಕ್ತರಿಗೆ ಭೋಗ್ಯನೂ ಆಗಿರುವ ಶ್ರೀ ವೇಂಕಟಾಚಲಪತೇ! ನಿನಗೆ ಸುಪ್ರಭಾತವು.

**ಇತ್ಥಂ ವೃಷಾಚಲಪತೇರಿಹ ಸುಪ್ರಭಾತಮ್।**
**ಯೇ ಮಾನವಾಃ ಪ್ರತಿದಿನಂ ಪಠಿತುಂ ಪ್ರವೃತ್ತಾಃ॥**
**ತೇಷಾಂ ಪ್ರಭಾತಸಮಯೇ ಸ್ಮೃತಿರಂಗಭಾಜಾಂ।**
**ಪ್ರಜ್ಞಾಂ ಪರಾರ್ಥ ಸುಲಭಾಂ ಪರಮಾಂ ಪ್ರಸೂತೇ ॥ 29॥**

ಶ್ರೀ ವೇಂಕಟಾಚಲಾಧೀಶನ ಇಂತಹ ಸುಪ್ರಭಾತ ಸ್ತೋತ್ರವನ್ನು ನೆನಪಿನಲ್ಲಿಟ್ಟುಕೊಂಡು ಪ್ರತಿದಿನವೂ ಬೆಳಗಿನ ಕಾಲದಲ್ಲಿ ಯಾರು ಪಠಿಸುವ ಅಭ್ಯಾಸವಿಟ್ಟುಕೊಳ್ಳುವರೋ ಅವರಿಗೆ ಶ್ರೀ ವೇಂಕಟೇಶನು ಪರಮ ಪವಿತ್ರವೂ,ಪರವಿದ್ಯೆ (ವೇದಾಂತವಿದ್ಯೆ)ಯ ಅರ್ಥವನ್ನು ತಿಳಿಸುವುದರಲ್ಲಿ ಸುಲಭವೂ, ಆದ ಪ್ರಜ್ಞೆಯನ್ನು ಅತಿಶಯವಾಗಿ ಕರುಣಿಸುತ್ತಾನೆ.


S.P.28-29
A·SEENU

# ಶ್ರೀ ವೇಂಕಟೇಶ ಸ್ತೋತ್ರಮ್

# ಶ್ರೀ ವೇಂಕಟೇಶ ಪ್ರಪತ್ತಿಃ

# ಶ್ರೀ ವೇಂಕಟೇಶ ಮಂಗಳಾಶಾಸನಮ್

# ಶ್ರೀ ವೇಂಕಟೇಶ ಸ್ತೋತ್ರಮ್

**ಕಮಲಾಕುಚಚೂಚುಕಕುಂಕುಮತೋ**
**ನಿಯತಾರುಣಿತಾತುಲನೀಲತನೋ ।**
**ಕಮಲಾಯತಲೋಚನ ಲೋಕಪತೇ**
**ವಿಜಯೀ ಭವ ವೇಂಕಟಶೈಲಪತೇ ॥ 1 ॥**

ಯಾವ ಶ್ರೀದೇವಿಯ ಚಿಹ್ನದಿಂದ ಪರಾತ್ಪರವಾದ ತತ್ತ್ವವನ್ನು ನಿರ್ಣಯಿಸಲು ತಾತ್ತ್ವಿಕರು ಸಮರ್ಥರಾಗುವರೋ, ಆ ದೇವಿಯ ವಕ್ಷಪ್ರದೇಶದ ಅಂಗರಾಗದಿಂದ ಅನವರತವೂ. ಅರುಣವರ್ಣದಿಂದ ಶೋಭಿಸುವ ನೀಲಮೇಘದಂತಹ ಶರೀರದವನೂ, ಕಮಲ ದಳದಂತಹ ವಿಶಾಲ ನೇತ್ರದವನೂ, ಸಮಸ್ತ ಲೋಕಗಳ ಅಧಿಪತಿಯೂ ಆದ ಶ್ರೀವೇಂಕಟೇಶ! ನೀನು ಸರ್ವೋತ್ಕೃಷ್ಟನಾಗಿರು! ಪುರುಷೋತ್ತಮನಾಗಿರು.

**ಸಚತುರ್ಮುಖ ಷಣ್ಮುಖ ಪಂಚಮುಖ -**
**ಪ್ರಮುಖಾಖಿಲದೈವತಮೌಳಿಮಣೇ ।**
**ಶರಣಾಗತವತ್ಸಲ ಸಾರನಿಧೇ**
**ಪರಿಪಾಲಯ ಮಾಂ ವೃಷಶೈಲಪತೇ ॥ 2 ॥**

ಚತುರ್ಮುಖನಾದ ಬ್ರಹ್ಮ, ಆರು ಮುಖಗಳುಳ್ಳ ಕುಮಾರಸ್ವಾಮಿ,ಐದು ಮುಖಗಳುಳ್ಳ ಈಶ್ವರನೇ ಮೊದಲಾದ ಸಮಸ್ತ ದೇವತೆ ಗಳಿಗೂ ಶಿರೋಮಣಿಯಾಗಿಯೂ, ಶರಣಾಗತರಾದವರಲ್ಲಿ ವಾತ್ಸಲ್ಯವುಳ್ಳವನಾಗಿಯೂ ಶೌರ್ಯನಿಧಿಯಾಗಿಯೂ ಇರುವ ವೃಷ ಶೈಲಪತಿಯಾದ ವೇಂಕಟೇಶ! ನನ್ನನ್ನು ಪರಿಪಾಲಿಸು.


A.SEENU
ST.1

**ಅತಿವೇಲತಯಾ ತವ ದುರ್ವಿಷಹೈ -**
**ರನುವೇಲಕೃತೈರಪರಾಧಶತೈಃ ।**
**ಭರಿತಂ ತ್ವರಿತಂ ವೃಷಶೈಲಪತೇ**
**ಪರಯಾ ಕೃಪಯಾ ಪರಿಪಾಹಿ ಹರೇ ॥ 3 ॥**

ನಾನು ಮಾಡಿರುವ ಅಪರಾಧಗಳು ಗಣನಾತೀತವಾದವು.ಆದುದರಿಂದಲೇ ನಿನ್ನಿಂದ ಸಹಿಸಲೂ ಕಷ್ಟವಾದವು. ಅಂತಹ ಅಪರಾಧಗಳಿಂದ ತುಂಬಿಕೊಂಡಿರುವ ನನ್ನನ್ನು ಹೇ ವೃಷಾಚಲಪತೇ, ಹರೇ ! ಕಾಲ ವಿಳಂಬ ಮಾಡದೆ ಪರಮ ಕರುಣೆಯಿಂದ ಕಾಪಾಡು.

**ಅಧಿವೇಂಕಟಶೈಲಮುದಾರಮತೇ -**
**ರ್ಜನತಾಭಿಮತಾಧಿಕದಾನರತಾತ್ ।**
**ಪರದೇವತಯಾ ಗದಿತಾನ್ನಿಗಮೈಃ**
**ಕಮಲಾದಯಿತಾನ್ನ ಪರಂ ಕಲಯೇ ॥ 4 ॥**

ಶ್ರೀ ವೇಂಕಟಾಚಲದಲ್ಲಿ ವಾಸರಸಿಕನಾಗಿ, ಪರಮೌದಾರ್ಯದಿಂದ ಕೂಡಿ ಜನತೆಯ ಅಭಿಮತಕ್ಕಿಂತಲೂ ಅಧಿಕವಾಗಿ ದಾನಶೀಲನಾಗಿರುವ, ಶ್ರುತಿಗಳಿಂದ ಪರದೇವತೆ ಎಂದು ಹೇಳಲ್ಪಟ್ಟಿರುವ ಶ್ರಿಯಃ ಪತಿಯಾದ ಶ್ರೀಮನ್ನಾರಾಯಣನನ್ನು ಬಿಟ್ಟು ಮತ್ತೆ ಯಾರನ್ನೂ ಆಶ್ರಯಿಸುವುದಿಲ್ಲ. ಶ್ರೀವೆಂಕಟೇಶ್ವರ ಸ್ವರೂಪದಿಂದಿರುವ ಶ್ರೀಮನ್ನಾರಾಯಣನೇ ನನಗೆ ಆಶ್ರಯವೆಂದು ಇದರ ಅರ್ಥ.


ST.2.3.4

**ಕಲವೇಣುರವಾವಶಗೋಪವಧೂ -**
**ಶತಕೋಟಿವೃತಾತ್ ಸ್ಮರಕೋಟಿಸಮಾತ್ ।**
**ಪ್ರತಿವಲ್ಲವಿಕಾಭಿಮತಾತ್ಸುಖದಾತ್**
**ವಸುದೇವಸುತಾನ್ನ ಪರಂ ಕಲಯೇ ॥5॥**

ಅವ್ಯಕ್ತ ಮಧುರವಾದ ಕೊಳಲಿನ ಮಧುರವಾದ ಧ್ವನಿಯಿಂದಲೇ ವಶೀಭೂತರಾದ ಅಪರಿಮಿತ ಗೋಪವನಿತೆಯರಿಂದ ಸುತ್ತವರಿಯಲ್ಪಟ್ಟವನು, ಕೋಟಿ ಮನ್ಮಥರ ಲಾವಣ್ಯವುಳ್ಳವನು, ಪ್ರತಿ ಗೋಪಿಯರಿಗೂ ಅಭಿಮತನಾಗಿಯೂ, ಎಲ್ಲರಿಗೂ ಸುಖವನ್ನು ಕೊಡುವವನಾಗಿಯೂ ಇರುವ ವಸುದೇವ ಸುತನಾದ ಶ್ರೀ ಕೃಷ್ಣನಲ್ಲದೆ ನಾನು ಮತ್ತೆ ಯಾರನ್ನೂ ಧ್ಯಾನಿಸುವುದಿಲ್ಲ.

**ಅಭಿರಾಮಗುಣಾಕರ ದಾಶರಥೇ**
**ಜಗದೇಕಧನುರ್ಧರ ಧೀರಮತೇ ।**
**ರಘುನಾಯಕ ರಾಮ ರಮೇಶ ವಿಭೋ**
**ವರದೋ ಭವ ದೇವ ದಯಾಜಲಧೇ ॥ 6॥**

ಹಿಂದಿನ ಪದ್ಯದಲ್ಲಿ ಶ್ರೀ ವೇಂಕಟೇಶ್ವರನನ್ನು ಶ್ರೀ ಕೃಷ್ಣಾವತಾರದ ಮಹಿಮೆಯಿಂದ ಸ್ತುತಿಸಿದ ಕವಿ, ಇಲ್ಲಿಂದ ಮುಂದೆ ಮೂರು ಪದ್ಯಗಳಿಂದ ಶ್ರೀರಾಮಾವತಾರದ ಗುಣಗಳನ್ನು ವರ್ಣಿಸುತ್ತಾನೆ. ದಶರಥ ಪುತ್ರನಾಗಿಯೂ,ಸಕಲ ಕಲ್ಯಾಣ ಗುಣಗಳಿಗೂ ಆಕರನಾಗಿಯೂ, ಸಮಸ್ತ ಪ್ರಪಂಚದಲ್ಲೆಲ್ಲ ಏಕಮಾತ್ರ ಧನುರ್ಧಾರಿಯಾಗಿಯೂ, ಲೋಕೈಕ ವೀರನಾಗಿಯೂ, ರಘುವಂಶವೆಂಬ ಮಾಲೆಯಲ್ಲಿ ನಾಯಕಮಣಿಯಾಗಿಯೂ, ರಾಮ - ಎಂಬ ಜಗನ್ಮಂಗಳ ನಾಮಧೇಯವುಳ್ಳವನಾಗಿಯೂ,ಶ್ರಿಯಃಪತಿಯಾಗಿಯೂ, ಕರುಣಾ ಸಮುದ್ರನಾಗಿಯೂ ಇರುವ ದೇವ ದೇವ! ಪ್ರಸನ್ನನಾಗು.


A.S
ST.5

**ಅವನೀತನಯಾ ಕಮನೀಯಕರಂ**

**ರಜನೀಕರಚಾರು ಮುಖಾಂಬುರುಹಮ್ ।**

**ರಜನೀಚರರಾಜತಮೋಮಿಹಿರಂ**

**ಮಹನೀಯ ಮಹಂ ರಘುರಾಮಮಯೇ ॥ 7॥**

ಸೀತಾದೇವಿಯ ಸಂಪರ್ಕದಿಂದ ಮನೋಹರನೂ, ಚಂದ್ರನಂತೆ ಆಹ್ಲಾದಕರವಾದ ಮುಖ ಕಮಲವುಳ್ಳವನೂ, ರಾಕ್ಷಸ ರಾಜನೆಂಬ ಅಂಧಕಾರಕ್ಕೆ ಸೂರ್ಯನೂ, ಮಹಾಮಹಿಮನೂ ಆಗಿರುವ ರಘುರಾಮನನ್ನು ರಕ್ಷಕನನ್ನಾಗಿ ಆಶ್ರಯಿಸುತ್ತೇನೆ.


**ಸುಮುಖಂ ಸುಹೃದಂ ಸುಲಭಂ ಸುಖದಂ**

**ಸ್ವನುಜಂ ಚ ಸುಕಾಯಮಮೋಘಶರಮ್ ।**

**ಅಪಹಾಯ ರಘೋದ್ವಹ ಮನ್ಯಮಹಂ**

**ನ ಕಥಂಚನ ಕಂಚನ ಜಾತು ಭಜೇ ॥ 8॥**

ಶ್ರೀರಾಮನು ಸುಂದರಮೂರ್ತಿ ಸುಮುಖ; ಸರ್ವಲೋಕ ಸುಹೃತ್; ಭಕ್ತರಿಗೆ ಸುಲಭ ; ಶಾಶ್ವತ ಸುಖವನ್ನು ನೀಡುವವನು; ಒಳ್ಳೆಯ ಸಹೋದರರುಳ್ಳವನು ಅಥವಾ ಭ್ರಾತೃಪ್ರೇಮದ ಸಜೀವ ಮೂರ್ತಿ; ವ್ಯರ್ಥವಾಗದಂತಹ ಶರಸಂಧಾನವುಳ್ಳವನು. ಇಂತಹ ಅಪದ್ಬಂಧುವೂ, ಅನಾಥ ರಕ್ಷಕನೂ ಆದ ಶ್ರೀರಾಮಚಂದ್ರನನ್ನು ಬಿಟ್ಟು ಮತ್ತೆ ಯಾರನ್ನೂ ಎಂದಿಗೂ ನಾನು ಆಶ್ರಯಿಸುವುದಿಲ್ಲ.


ST.6.7.8

**ವಿನಾ ವೇಂಕಟೇಶಂ ನ ನಾಥೋ ನ ನಾಥಃ**
**ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ ।**
**ಹರೇ ವೇಂಕಟೇಶ ಪ್ರಸೀದ ಪ್ರಸೀದ**
**ಪ್ರಿಯಂ ವೇಂಕಟೇಶ ಪ್ರಯಚ್ಛ ಪ್ರಯಚ್ಛ** ॥ 9॥

ಶ್ರೀ ವೇಂಕಟೇಶನನ್ನು ಬಿಟ್ಟರೆ ಬೇರೆ ರಕ್ಷಕರಿಲ್ಲ. "ಕಲೌ ವೇಂಕಟ ನಾಯಕಃ" ಎಂಬಂತೆ ಈ ಕಲಿ ಕಾಲದಲ್ಲಿಯಂತೂ ಶ್ರೀವೇಂಕಟೇಶನೇ ಉತ್ತಾರಕನು. ಆದುದರಿಂದಲೇ ಎಲೈ ವೇಂಕಟೇಶನೇ ! ಯಾವಾಗಲೂ ನಿನ್ನನ್ನು ಸ್ಮರಿಸುತ್ತೇನೆ.

**ಅಹಂ ದೂರತಸ್ತೇ ಪದಾಂಭೋಜಯುಗ್ಮ -**
**ಪ್ರಣಾಮೇಚ್ಛಯಾಽಽಗತ್ಯ ಸೇವಾಂ ಕರೋಮಿ ।**
**ಸಕೃತ್ಸೇವಯಾ ನಿತ್ಯ ಸೇವಾಫಲಂ ತ್ವಂ**
**ಪ್ರಯಚ್ಛ ಪ್ರಯಚ್ಛ ಪ್ರಭೋ ವೇಂಕಟೇಶ** ॥ 10 ॥

ವ್ಯಾವಹಾರಿಕ ದೃಷ್ಟಿಯಿಂದ ದಿವ್ಯ ಕ್ಷೇತ್ರವಾಸಿಯಾದ ನಿನ್ನ ಸಾನ್ನಿಧ್ಯದಿಂದ ನಾನು ಬಹು ದೂರದಲ್ಲಿರುತ್ತಿದ್ದೇನೆ. ಆದರೂ ನಿನ್ನ ಪಾದಪದ್ಮಯುಗ್ಮವನ್ನು ವಂದಿಸುವ ಅಪೇಕ್ಷೆಯಿಂದ ನಿನ್ನನ್ನು ಸಮೀಪಿಸಿ, ನಿನ್ನ ಸೇವೆಯನ್ನು ಮಾಡುತ್ತೇನೆ. ಎಲೈ ಪರಮ ಕರುಣಾಳುವಾದ ವೇಂಕಟೇಶನೆ? ನಾನು ಶಕ್ತಿಯಿದ್ದಂತೆ ನಿನ್ನ ಸಾನ್ನಿಧ್ಯಕ್ಕೆ ಬಂದು ಯತ್ಕಿಂಚಿತ್ ಸೇವೆಯನ್ನು ಒಂದೇ ಒಂದು ಸಾರಿ ನಡೆಸಿದರೂ, ನಿತ್ಯ ಸೇವಾಫಲವನ್ನು ನನಗೆ ಅನುಗ್ರಹಿಸು.

**ಅಜ್ಞಾನಿನಾ ಮಯಾ ದೋಷಾ**
**ನಶೇಷಾನ್ ವಿಹಿತಾನ್ ಹರೇ ।**
**ಕ್ಷಮಸ್ವ ತ್ವಂ ಕ್ಷಮಸ್ವ ತ್ವಂ**
**ಶೇಷಶೈಲಶಿಖಾಮಣೇ** ॥ 11 ॥

ಭಕ್ತನೂ ಈ ಸ್ತೋತ್ರವನ್ನು ಮುಗಿಸುತ್ತಾ ಕೊನೆಯದಾಗಿ ಭಗವಂತನಲ್ಲಿ ಕ್ಷಮೆಯನ್ನು ಯಾಚಿಸುತ್ತಾನೆ.ಶೇಷಶೈಲ ಶಿಖಾಮಣಿ ಯಾದ ಶ್ರೀವೇಂಕಟೇಶ! ನಾನು ಅಜ್ಞಾನಿ, ಸೇವೆ ಮಾಡುವ ನೆಪದಲ್ಲಿ ಯಾವ ಯಾವ ಅಪರಾಧಗಳನ್ನು ಮಾಡಿರುತ್ತೇನೋ ನನಗೆ ತಿಳಿಯದು. ಪರಮಕಾರಣಿಕನಾದ ನೀನು ನನ್ನ ಅಪರಾಧಗಳೆಲ್ಲವನ್ನೂ ಕ್ಷಮಿಸು.


A.S
ST. 9,10,11

# ಶ್ರೀ ವೇಂಕಟೇಶ ಪ್ರಪತ್ತಿಃ

**ಈಶಾನಾಂ ಜಗತೋಽಸ್ಯ ವೇಂಕಟಪತೇಃ**
**ವಿಷ್ಣೋಃ  ಪರಾಂ ಪ್ರೇಯಸೀಂ ।**
**ತದ್ವಕ್ಷ ಸ್ಥಲನಿತ್ಯವಾಸರಸಿಕಾಂ**
**ತತ್ ಕ್ಷಾಂತಿ ಸಂವರ್ಧಿನೀಮ್ ।**
**ಪದ್ಮಾಲಂಕೃತ ಪಾಣಿಪಲ್ಲವಯುಗಾಂ**
**ಪದ್ಮಾಸನಸ್ಥಾಂ ಶ್ರಿಯಂ**
**ವಾತ್ಸಲ್ಯಾದಿಗಣೋಜ್ಜ್ವಲಾಂ ಭಗವತೀಂ**
**ವಂದೇ ಜಗನ್ಮಾತರಮ್ ॥ 1॥**

ಈ ಜಗತ್ತಿಗೆ ಅಧೀಶ್ವರಿಯೂ, ಶ್ರೀ ವೇಂಕಟಾಚಲಪತಿಯ ಪರಮ ಪ್ರೇಯಸಿಯೂ, ಆತನ ವಕ್ಷಃಸ್ಥಲದಲ್ಲಿ ನಿತ್ಯವಾಸರಸಿ ಕಳೂ,ಆತನ ಕ್ಷಮಾಗುಣವನ್ನು, ಸಂವರ್ಧನೆಗೊಳಿಸುವವಳೂ,ಪದ್ಮಗಳಿಂದ ಅಲಂಕೃತವಾದ ಚಿಗುರಿನಂತಹ ಎರಡು ಕೈಗಳುಳ್ಳ ವಳೂ,ಪದ್ಮಾಸನಾಸೀನಳೂ, ವಾತ್ಸಲ್ಯಾದಿ ಗುಣಗಳಿಂದ ಉಜ್ಜ್ವಲಳೂ, ಜಗನ್ಮಾತೆಯೂ ಆದ ಶ್ರೀದೇವಿಯನ್ನು ನಮಸ್ಕರಿಸುತ್ತೇನೆ.


P.I

**ಶ್ರೀಮನ್ ಕೃಪಾಜಲನಿಧೇ ಕೃತಸರ್ವಲೋಕ**
**ಸರ್ವಜ್ಞಶಕ್ತ ನತವತ್ಸಲ ಸರ್ವಶೇಷಿನ್ ।**
**ಸ್ವಾಮಿನ್  ಸುಶೀಲಸುಲಭಾಶ್ರಿತಪಾರಿಜಾತ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ  ॥ 2 ॥**

ಶ್ರೀದೇವಿಯ ನಿತ್ಯಯೋಗವುಳ್ಳವನೂ, ಕೃಪಾ ಸಮುದ್ರನೂ, ಸರ್ವಲೋಕಗಳ ನಿಯಾಮಕನೂ, ಸರ್ವಜ್ಞನೂ, ಸರ್ವಶಕ್ತನೂ, ಅಶ್ರಿತ ವತ್ಸಲನೂ,ಸರ್ವಶೇಷಿ(ಪ್ರಭು)ಯೂ, ಸುಶೀಲನೂ,ಸುಲಭನೂ, ಅಶ್ರಿತ ಪಾರಿಜಾತನೂ ಆದ ಶ್ರೀವೇಂಕಟೇಶ! ನಿನ್ನ ಪಾದಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.


P.2

**ಅನೂಪುರಾರ್ಪಿತ ಸುಜಾತ ಸುಗಂಧಿ ಪುಷ್ಪ -**
**ಸೌರಭ್ಯ ಸೌರಭಕರೌ ಸಮಸನ್ನಿವೇಶೌ ।**
**ಸೌಮ್ಯೌ ಸದಾಽನುಭವನೇಽಪಿ ನವಾನುಭಾವ್ಯೌ**
**ಶ್ರೀವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥3॥**

ನೂಪುರದವರೆಗೆ ಅರ್ಪಿಸಲ್ಪಟ್ಟಿರುವ ಸುಗಂಧವೂ; ಸುಗಂಧಯುಕ್ತವೂ ಆದ ಹೂವಿನ ಸೌರಭ (ಸುಗಂಧ)ವನ್ನುಂಟು ಮಾಡುವ, ಒಂದೇ ಸಮನಾಗಿರುವ, ಕೋಮಲವಾಗಿರುವ, ಸರ್ವದಾ ಅನುಭವಿಸುತ್ತಿದ್ದರೂ ಹೊಸ ಹೊಸದಾಗಿಯೇ ಕಾಣುತ್ತಿರುವ ಶ್ರೀವೇಂಕಟೇಶನ ಚರಣಗಳನ್ನು ಶರಣು ಹೊಂದಿದ್ದೇನೆ.

**ಸದ್ಯೋವಿಕಾಸಿ ಸಮುದಿತ್ವರ ಸಾಂದ್ರರಾಗ -**
**ಸೌರಭ್ಯ ನಿರ್ಭರ ಸರೋರುಹ ಸಾಮ್ಯವಾರ್ತಾಮ್ ।**
**ಸಮ್ಯಕ್ಷು ಸಾಹಸಪದೇಷು ವಿಲೇಖಯಂತೌ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 4॥**

ಆಗ ತಾನೇ ವಿಕಾಸಗೊಂಡು ಸುವ್ಯಕ್ತವಾಗಿರುವ ಸಾಂದ್ರವಾದ ಅರುಣವರ್ಣದಿಂದಲೂ, ಸೌರಭ್ಯದಿಂದಲೂ ಕೂಡಿರುವ ಕಮಲಗಳ ಸಾದೃಶ್ಯವನ್ನು ಸೂಚಿಸುತ್ತಿರುವ ಶ್ರೀವೇಂಕಟೇಶನ ಚರಣಗಳನ್ನು ಶರಣು ಹೊಂದಿದ್ದೇನೆ.

**ರೇಖಾಮಯಧ್ವಜ ಸುಧಾಕಲಶಾತಪತ್ರ -**
**ವಜ್ರಾಂಕುಶಾಂಬುರುಹ ಕಲ್ಪಕ ಶಂಖಚಕ್ರೈಃ ।**
**ಭವ್ಯೈ ರಲಂಕೃತತಲೌ ಪರತತ್ತ್ವ ಚಿಹ್ನೈ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 5 ॥**

ಪರತತ್ತ್ವದ ಅಸಾಧಾರಣ ಚಿಹ್ನೆಗಳಾದ ರೇಖಾರೂಪದಿಂದಿರುವ ಧ್ವಜ,ಶಂಖ,ಚಕ್ರವೇ ಮೊದಲಾದ ಮಂಗಕರವಾದ ಚಿಹ್ನೆಗಳಿಂದ ಅಲಂಕೃತವಾದ ಶ್ರೀವೇಂಕಟೇಶನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.

**ತಾಮ್ರೋದರದ್ಯು ತಿಪರಾಜಿತಪದ್ಮರಾಗೌ**
**ಬಾಹ್ಯೈ ರ್ಮಹೋಭಿರಭಿಭೂತಮಹೇಂದ್ರನೀಲೌ ।**
**ಉದ್ಯನ್ನಖಾಂಶುಭಿರುದಸ್ತಶಶಾಂಕಭಾಸೌ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 6 ॥**

ಅಂಗಾಲಿನ ಅರುಣಕಾಂತಿಯಿಂದ ತಿರಸ್ಕರಿಸಲ್ಪಟ್ಟ ಪದ್ಮರಾಗಮಣಿವುಳ್ಳವನಾಗಿಯೂ, ಮುಂಗಾಲಿನ ಕಾಂತಿಯಿಂದ ಇಂದ್ರ ನೀಲಮಣಿಯ ಕಾಂತಿಯನ್ನು ಮರೆಮಾಡುವುದಾಗಿಯೂ, ಚಿಮ್ಮುತ್ತಿರುವ ಉಗುರುಗಳ ಕಾಂತಿಯಿಂದ ಚಂದ್ರಿಕೆಯನ್ನು ಸೋಲಿ ಸುತ್ತಲೂ ಇರುವ ಶ್ರೀವೇಂಕಟೇಶನ ಪಾದಾರವಿಂದಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.


A.S
P.3-4-5-6

**ಸಪ್ರೇಮಭೀತಿ ಕಮಲಾಕರಪಲ್ಲವಾಭ್ಯಾಂ**

**ಸಂವಾಹನೇಽಪಿ ಸಪದಿ ಕ್ಲಮಮಾದಧಾನೌ ।**

**ಕಾಂತಾವವಾಙ್ಮನಸಗೋಚರಸೌಕುಮಾರ್ಯೌ**

**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 7॥**

ಶ್ರೀದೇವಿ ಕಮಲೆಯು ಚಿಗುರಿನಂತಹ ತನ್ನ ಕೈಗಳಿಂದ ಪ್ರೇಮದಿಂದಲೂ,ಭಯದಿಂದಲೂ ಮೃದುವಾಗಿ ಚರಣಗಳನ್ನು ಒತ್ತುತ್ತಿದ್ದರೂ ಕೂಡಲೇ ಬಾಡಿ ಹೋಗುತ್ತಿರುವ, ಆದುದರಿಂದಲೇ ಮಾತಿನಿಂದ ತಿಳಿಸಲೂ-ಮನಸ್ಸಿನಿಂದ ಯೋಚಿಸಲೂ ಆಗದಷ್ಟು ಕೋಮಲವಾಗಿರುವ, ಮನೋಹರವಾದ ಶ್ರೀವೇಂಕಟೇಶನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.

**ಲಕ್ಷ್ಮೀ ಮಹೀ ತದನುರೂಪನಿಜಾನುಭಾವ -**

**ನೀಳಾದಿದಿವ್ಯ ಮಹಿಷೀಕರಪಲ್ಲವಾನಾಮ್ ।**

**ಆರುಣ್ಯ ಸಂಕ್ರಮಣತಃ ಕಿಲ ಸಾಂದ್ರರಾಗೌ**

**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 8 ॥**

ಈ ಪದ್ಯದಲ್ಲಿಯೂ ಪರಮಾತ್ಮನ-ಸೌಕುಮಾರ್ಯಾತಿಶಯವನ್ನೇ ವರ್ಣಿಸುತ್ತಾನೆ. ಶ್ರೀದೇವಿ,ಭೂದೇವಿ,ನೀಳಾದೇವಿಯೇ ಮೊದ ಲಾದ ತನಗೆ ಅನುರೂಪವಾದ ತನ್ನ ಮಹಿಷಿಯರ ಕರಪಲ್ಲವಗಳ ಸಂಪರ್ಕದಿಂದಲೇ ಅರುಣವಾಗಿವೆಯೋ ಎಂಬಂತಿರುವ ಶ್ರೀವೇಂಕಟೇಶ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.


P. 7-8
AS

**ನಿತ್ಯಾನಮದ್ವಿಧಿಶಿವಾದಕಿರೀಟಕೋಟಿ -**
**ಪ್ರತ್ಯುಪ್ತದೀಪ್ತ ನವರತ್ನಮಹಃ ಪ್ರರೋಹೈಃ ।**
**ನೀರಾಜನಾವಿಧಿಮುದಾರಮುಪಾದಧಾನೌ**
**ಶ್ರೀ ವೇಂಕಟೇಶ  ಚರಣೌ ಶರಣಂ ಪ್ರಪದ್ಯೇ  ॥೨॥**

ನವರತ್ನ ಖಚಿತವಾಗಿ ಥಳಥಳಿಸುವ ಕಿರೀಟಗಳನ್ನು ಧರಿಸಿದ ಬ್ರಹ್ಮ, ರುದ್ರನೇ ಮೊದಲಾದ ದೇವೋತ್ತಮರು ಪ್ರತಿದಿನವೂ ಬಂದು ಪಾದಾರವಿಂದಗಳ ನಮಸ್ಕಾರ ಮಾಡುವುದರಿಂದಲೇ ಧಾರಾಳವಾದ ನೀರಾಜನ (ಮಂಗಳಾರತಿ)ವನ್ನು ಅನುಭವಿಸುತ್ತಿರುವ ಶ್ರೀವೇಂಕಟೇಶನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.


P.9

**ವಿಷ್ಣೋಃ ಪದೇ ಪರಮ ಇತ್ಯುದಿತಪ್ರಶಂಸೌ**
**ಯೌ ಮಧ್ವಉತ್ಸ ಇತಿಭೋಗ್ಯತಯಽಪ್ಯುಪಾತ್ತೌ ।**
**ಭೂಯಸ್ತಥೇತಿ ತವ ಪಾಣಿತಲಪ್ರದಿಷ್ಟೌ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 10 ॥**

ಪರಮ ಶ್ರೇಷ್ಠವಾದ ವಿಷ್ಣುವಿನ ಪಾದಗಳೆಂದು ಹೊಗಳಲ್ಪಟ್ಟವುಗಳಾಗಿಯೂ ಪರಮ ಭೋಗ್ಯವೆಂದು ಸ್ವೀಕರಿಸಲ್ಪಟ್ಟವಾಗಿಯೂ ಮತ್ತು ಅಭಯ ಹಸ್ತದಿಂದಲೇ-'ಮಾಮೇಕಂ ಶರಣಂ ವ್ರಜ'-ಎಂಬ ಉಪದೇಶಕ್ಕೆ ವಿಷಯವಾಗಿಯೂ ಇರುವ ಶ್ರೀವೇಂಕಟೇಶನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.


**ಪಾರ್ಥಾಯ ತತ್ಸದೃಶ ಸಾರಿಥಿನಾ ತ್ವಯೈವ**
**ಯೌ ದರ್ಶಿತೌ ಸ್ವಚರಣೌ ಶರಣಂ ವ್ರಜೇತಿ ।**
**ಭೂಯೋಽಪಿ  ಮಹ್ಯಮಿಹ ತೌ ಕರದರ್ಶಿತೌ ತೇ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 11 ॥**

ಶ್ರೀವೇಂಕಟೇಶ ! ಹಿಂದೆ ಅರ್ಜುನನಿಗೆ ಅವನಿಗೆ ಸರಿಯಾದ ಸಾರಥಿಯಾದ ನಿನ್ನಿಂದಲೇ ತೋರಿಸಲ್ಪಟ್ಟವಾಗಿಯೂ, ಈಗ ಮತ್ತೆ ನೀನೇ ನಿನ್ನ ಕೈಯಿಂದ ನನಗಾಗಿ ತೋರಿಸಲ್ಪಟ್ಟವೂ ಆಗಿರುವ ನಿನ್ನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.


P.10.11

**ಮನ್ಮೂರ್ಧ್ನಿ ಕಾಳಿಯಫಣೇ ವಿಕಟಾಟವೀಷು**
**ಶ್ರೀ ವೇಂಕಟಾದ್ರಿ ಶಿಖರೇ ಶಿರಸಿ ಶ್ರುತೀನಾಮ್ ।**
**ಚಿತ್ತೇಽಪ್ಯನನ್ಯ ಮನಸಾಂ ಸಮಮಾಹಿತೌ ತೇ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 12 ॥**

ನನ್ನ ತಲೆಯ ಮೇಲೆಯೂ, ಕಾಳಿಂಗ ಸರ್ಪನ ಹೆಡೆ ಮೇಲೆಯೂ, ಭಯಂಕರವಾದ ಕಾಡುಗಳಲ್ಲಿಯೂ, ಶ್ರೀ ವೇಂಕಟಾಚಲ ಶಿಖರದಲ್ಲಿಯೂ, ಶ್ರುತಿಗಳ ಶಿರಸ್ಸಿ (ಉಪನಿಷತ್ತುಗಳು)ನಲ್ಲಿಯೂ, ಹಾಗೆಯೇ ಅನನ್ಯ ಮನಸ್ಕರಾಗಿ ಭಜಿಸುವವರ ಮನಸ್ಸಿನಲ್ಲಿಯೂ ಒಂದೇ ಸಮನಾಗಿ ನೆಲೆಸಿರುವ ಶ್ರೀವೇಂಕಟೇಶನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.


P.12

**ಆಮ್ಲಾನ ಹೃಷ್ಯದವನೀತಲ ಕೀರ್ಣಪುಷ್ಪೌ**
**ಶ್ರೀವೇಂಕಟಾದ್ರಿ ಶಿಖರಾಭರಣಾಯಮಾನೌ ।**
**ಆನಂದಿತಾಖಿಲಮನೋನಯನೌ ತವೈತೌ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 13 ॥**

ಬಾಡದೆ ವಿಕಸಿತವಾಗಿ ಭೂತಲದಲ್ಲಿ ಇಡಲ್ಪಟ್ಟ ಹೂವುಗಳಂತಿರುವ, ಶ್ರೀ ವೇಂಕಟಾಚಲದ ಶಿಖರಕ್ಕೆ ಆಭರಣ ಪ್ರಾಯವಾದ, ಸಮಸ್ತ ಜನರ ಮನಸ್ಸನ್ನೂ, ಕಣ್ಣುಗಳನ್ನೂ ಆನಂದಗೊಳಿಸುವ ಶ್ರೀ ವೇಂಕಟೇಶನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.

**ಪ್ರಾಯಃ ಪ್ರಪನ್ನ ಜನತಾ ಪ್ರಥಮಾವಗಾಹ್ಯೌ**
**ಮಾತುಃಸ್ತನಾವಿವ ಶಿಶೋರಮೃತಾಯಮಾನೌ ।**
**ಪ್ರಾಪ್ತೌ ಪರಸ್ಪರತುಲಾಮತುಲಾಂತರೌ ತೇ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 14 ॥**

ಓ! ವೇಂಕಟೇಶ ! ಪ್ರಪನ್ನ ಜನಸಮೂಹಕ್ಕೆ ಮುಖ್ಯವಾದ ಅವಲಂಬನವಾಗಿಯೂ, ಶಿಶುವಿಗೆ ಮಾತೆಯ ಸ್ತನ್ಯದಂತೆ ಅಮೃತಪ್ರಾಯವಾಗಿಯೂ,ಪರಸ್ಪರ ತಮ್ಮದೇ ಆದ ಸಾದೃಶ್ಯವುಳ್ಳವಾಗಿಯೂ, ಸದೃಶವಾದ ಮತ್ತೊಂದು ವಸ್ತುವಿಲ್ಲದೆಯೂ ಇರುವ ನಿನ್ನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.

**ಸತ್ತ್ವೋತ್ತರೈಸ್ಸತತಸೇವ್ಯಪದಾಂಬುಜೇನ**
**ಸಂಸಾರತಾರಕ ದಯಾರ್ದ್ರದೃಗಂಚಲೇನ ।**
**ಸೌಮ್ಯೋಪಯಂತೃಮುನಿನಾ ಮಮ ದರ್ಶಿತೌ ತೇ**
**ಶ್ರೀ ವೇಂಕಟೇಶ ಚರಣೌ ಶರಣಂ ಪ್ರಪದ್ಯೇ ॥ 15 ॥**

ಪರಮ ಸಾತ್ತ್ವಿಕರಿಂದ ಸತತವಾಗಿ ಆಶ್ರಯಿಸಲ್ಪಟ್ಟ ಪಾದಕಮಲಗಳುಳ್ಳವನೂ, ಆಶ್ರಯಿಸಿದವರಿಗೆ ಮುಕ್ತಿಯ ದಾರಿಯನ್ನು ತೋರಿಸುವ ಕೃಪಾದೃಷ್ಟಿಯುಳ್ಳವನೂ, ಆಚಾರ್ಯರೂ ಆದ ಸೌಮ್ಯಜಾಮಾತೃ ಮುನಿಗಳಿಂದ ನನಗೆ ತೋರಿಸಲ್ಪಟ್ಟ ನಿನ್ನ ಚರಣಗಳನ್ನು ರಕ್ಷಕವನ್ನಾಗಿ ಆಶ್ರಯಿಸಿದ್ದೇನೆ.



**ಶ್ರೀಶ ಶ್ರಿಯಾ ಘಟಿಕಯಾ ತ್ವದುಪಾಯಭಾವೇ**

**ಪ್ರಾಪ್ಯೇ ತ್ವಯಿ ಸ್ವಯಮುಪೇಯತಯಾ ಸ್ಫುರಂತ್ಯಾ ।**

**ನಿತ್ಯಾಶ್ರಿತಾಯ ನಿರವದ್ಯಗುಣಾಯ ತುಭ್ಯಂ**

**ಸ್ಯಾಂ ಕಿಂಕರೋ ವೃಷಗಿರೀಶ ನ ಜಾತು ಮಹ್ಯಮ್ ॥ 16 ॥**

ಓ! ಶ್ರಿಯಃಪತಿಯಾದ ವೃಷಗಿರೀಶ! ಮುಮುಕ್ಷುವಿಗೆ ಪ್ರಾಪ್ಯ (ಹೊಂದಲು ಯೋಗ್ಯ)ನಾದ ನಿನ್ನ ವಿಷಯದಲ್ಲಿ ಘಟಕಾ ಸ್ವರೂಪ ಆದ ಶ್ರೀದೇವಿಯಿಂದ ನಿತ್ಯಾಶ್ರಿತನಾಗಿಯೂ, ಸಕಲ ಕಲ್ಯಾಣ ಗುಣಾಕರನಾಗಿಯೂ ಇರುವ ನಿನಗೆ ನಾನು ಎಂದೆಂದಿಗೂ ಕಿಂಕರ ನಾಗಿರುವೆನು.


P.16

# ಶ್ರೀ ವೇಂಕಟೇಶ ಮಂಗಳಾಶಾಸನಮ್

**ಶ್ರಿಯಃ ಕಾಂತಾಯ ಕಲ್ಯಾಣನಿಧಯೇಽ ನಿಧಯೇಽರ್ಥಿನಾಮ್।**

**ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಮ್ ॥ 1 ॥**

ಶ್ರಿಯಃಪತಿಯೂ,ಕಲ್ಯಾಣಗುಣಾಕರನೂ,ಆರ್ಥಿ(ಯಾಚಕ)ಗಳಿಗೆ ನಿಧಿಯೂ,ಶ್ರೀ ವೇಂಕಟಾಚಲ ನಿವಾಸಿಯೂ ಆದ ಶ್ರೀನಿವಾಸ! ನಿನಗೆ ಮಂಗಳವು.

**ಲಕ್ಷ್ಮೀ ಸವಿಭ್ರಮಾಲೋಕ ಸುಭ್ರೂವಿಭ್ರಮ ಚಕ್ಷುಷೇ ।**

**ಚಕ್ಷುಷೇ ಸರ್ವಲೋಕಾನಾಂ ವೇಂಕಟೇಶಾಯ ಮಂಗಳಮ್ ॥ 2 ॥**

ಲಕ್ಷ್ಮಿಯ ಭಾವಪೂರ್ಣವಾದ ನೋಟಕ್ಕೆ ಅನುರೂಪವಾದ ಹುಬ್ಬಿನ ವಿಲಾಸದಿಂದ ಕೂಡಿದ ಕಣ್ಣುಗಳುಳ್ಳವನೂ, ಸರ್ವ ಲೋಕಗಳಿಗೂ ಕಣ್ಣಾಗಿರುವವನೂ ಆದ ವೇಂಕಟೇಶ! ನಿನಗೆ ಮಂಗಳವು.

**ಶ್ರೀ ವೇಂಕಟಾದ್ರಿ ಶೃಂಗಾಗ್ರಮಂಗಳಾಭರಣಾಂಘ್ರಯೇ ।**

**ಮಂಗಳಾನಾಂ ನಿವಾಸಾಯ ಶ್ರೀನಿವಾಸಾಯ ಮಂಗಳಮ್ ॥ 3 ॥**

ಶ್ರೀ ವೇಂಕಟಾಚಲದ ಶಿಖರಕ್ಕೆ ಮಂಗಳಾಭರಣವಾದ ಪಾದಗಳುಳ್ಳವನೂ, ಶುಭಕ್ಕೆ ವಾಸಸ್ಥಾನನೂ ಆದ ಶ್ರೀನಿವಾಸ! ನಿನಗೆ ಮಂಗಳವು.

**ಸರ್ವಾವಯವಸೌಂದರ್ಯ ಸಂಪದಾ ಸರ್ವಚೇತಸಾಮ್ ।**

**ಸದಾ ಸಮ್ಮೋಹನಾಯಾಸ್ತು ವೇಂಕಟೇಶಾಯ ಮಂಗಳಮ್ ॥ 4 ॥**

ಎಲ್ಲ ಅವಯವಗಳ ಸೌಂದರ್ಯಸಂಪತ್ತಿನಿಂದ ಸರ್ವಚೇತನರಿಗೂ ಸರ್ವದಾ ಮೋಹನನಾದ ವೇಂಕಟೇಶ! ನಿನಗೆ ಮಂಗಳವು.

**ನಿತ್ಯಾಯ ನಿರವದ್ಯಾಯ ಸತ್ಯಾನಂದಚಿದಾತ್ಮನೇ ।**

**ಸರ್ವಾಂತರಾತ್ಮನೇ ಶ್ರೀಮದ್ವೇಂಕಟೇಶಾಯ ಮಂಗಳಮ್ ॥5 ॥**

ನಿತ್ಯನೂ ನಿರವದ್ಯನೂ (ದೋಷರಹಿತನೂ) ಸಚ್ಚಿದಾನಂದಾತ್ಮಕನೂ, ಸರ್ವಾಂತರ್ಯಾಮಿಯೂ ಆದ ಶ್ರೀಮದ್ವೇಂಕಟೇಶ! ನಿನಗೆ ಮಂಗಳವು.

**ಸ್ವತಸ್ಸರ್ವವಿದೇ ಸರ್ವಶಕ್ತಯೇ ಸರ್ವಶೇಷಿಣೇ ।**

**ಸುಲಭಾಯ ಸುಶೀಲಾಯ ವೇಂಕಟೇಶಾಯ ಮಂಗಳಮ್ ॥6 ॥**

ಸರ್ವಜ್ಞನೂ, ಸರ್ವಶಕ್ತನೂ, ಸರ್ವಶೇಷಿಯೂ, ಸುಲಭನೂ, ಸುಶೀಲನೂ ಆದ ವೇಂಕಟೇಶ! ನಿನಗೆ ಮಂಗಳವು.

**ಪರಸ್ಮೈಬ್ರಹ್ಮಣೇ ಪೂರ್ಣಕಾಮಾಯ ಪರಮಾತ್ಮನೇ ।**

**ಪ್ರಯುಂಜೇ ಪರತತ್ತ್ವಾಯ ವೇಂಕಟೇಶಾಯ ಮಂಗಳಮ್ ॥7 ॥**

ಪರಬ್ರಮ್ಮನಂದೂ, ಪರಮಾತ್ಮನಂದೂ, ಪರತತ್ವವೆಂದು ತೆಲಿಯಲ್ ಪಟ್ಟಿರುವ ಪೂರ್ಣಕಾಮನಾದ ವೇಂಕಟೇಶಿನಿಗೇ ಮಂಗಳವು.

**ಆಕಾಲತತ್ತ್ವಮಶ್ರಾಂತಮಾತ್ಮನಾಮನು ಪಶ್ಯತಾಮ್ ।**

**ಅತೃಪ್ತ್ಯಮೃತರೂಪಾಯ ವೇಂಕಟೇಶಾಯ ಮಂಗಳಮ್ ॥8 ॥**

ಕಾಲತತ್ವದಿಂದ ಹಿಡಿದು ಸತತವಾಗಿ ತನ್ನ ದರ್ಶನ ಮಾಡುತ್ತಿರುವ ಚೇತನರಿಗೆಲ್ಲ ಎಷ್ಟು ನೋಡಿದರೂ ನೋಡುತ್ತಲೇ ಇರಬೇಕೆನ್ನುವಂತಹ ಅಮೃತದಂತಹ ರೂಪವುಳ್ಳ ವೇಂಕಟೇಶ ! ನಿನಗೆ ಮಂಗಳವು.

**ಪ್ರಾಯಸ್ಸ್ವಚರಣೌ ಪುಂಸಾಂ ಶರಣ್ಯತ್ವೇನ ಪಾಣಿನಾ ।**

**ಕೃಪಯಾऽऽದಿಶತೇ ಶ್ರೀಮದ್ವೇಂಕಟೇಶಾಯ ಮಂಗಳಮ್ ॥9 ॥**

ಚೇತನರನ್ನು ಉದ್ದೇಶಿಸಿ - "ನನ್ನ ಪಾದಗಳನ್ನು ರಕ್ಷಕವೆಂದು ಆಶ್ರಯಿಸಿ" ಎಂದು ಕೃಪೆಯಿಂದ ಕೈಯಿಂದ ತೋರಿಸುತ್ತಿರುವ ವೇಂಕಟೇಶ ! ನಿನಗೆ ಮಂಗಳವು.

**ದಯಾऽಮೃತತರಂಗಿಣ್ಯಾಸ್ತರಂಗೈರಿವ ಶೀತಲೈಃ ।**

**ಅಪಾಂಗೈಸ್ಸಿಂಚತೇ ವಿಶ್ವಂ ವೇಂಕಟೇಶಾಯ ಮಂಗಳಮ್ ॥10 ॥**

ದಯೆಯೆಂಬ ಅಮೃತ ನದಿಯ ಅಲೆಗಳಂತೆ ಶೀತಲವಾದ ಕಡೆಗಣ್ಣಿನ ನೋಟದಿಂದ ಪ್ರಪಂಚವನ್ನು ಸೇಚನೆಗೈಯುತ್ತಿರುವ ವೇಂಕಟೇಶ! ನಿನಗೆ ಮಂಗಳವು.

**ಸ್ರಗ್ಭೂಷಾಂಬರಹೇತೀನಾಂ ಸುಷಮಾವಹಮೂರ್ತಯೇ ।**

**ಸರ್ವಾರ್ತಿಶಮನಾಯಾಸ್ತು ವೇಂಕಟೇಶಾಯ ಮಂಗಳಮ್ ॥11 ॥**

ಧರಿಸಿರುವ ಹಾರಗಳಿಗೂ, ಕುಂಡಲಾದಿ ಅಲಂಕಾರಗಳಿಗೂ, ಶಂಖ ಚಕ್ರಾದಿ ದಿವ್ಯಾಯುಧಗಳಿಗೂ ಕಾಂತಿಯನ್ನುಂಟು ಮಾಡುವ ಅವಯವಗಳುಳ್ಳವನೂ ಎಲ್ಲರ ದುಃಖಗಳನ್ನೂ ಪರಿಹರಿಸುವವನೂ, ಆದ ಶ್ರೀವೇಂಕಟೇಶ! ನಿನಗೆ ಮಂಗಳವು.

**ಶ್ರೀವೈಕುಂಠವಿರಕ್ತಾಯ ಸ್ವಾಮಿಪುಷ್ಕರಿಣೀತಟೇ ।**

**ರಮಯಾ ರಮಮಾಣಾಯ ವೇಂಕಟೇಶಾಯ ಮಂಗಳಮ್ ॥12 ॥**

ಶ್ರೀ ವೈಕುಂಠದಲ್ಲಿ ವಿರಕ್ತನಾಗಿ ಸ್ವಾಮಿಪುಷ್ಕರಿಣೀ ತೀರದಲ್ಲಿ ರಮಾ ಸಹಿತನಾಗಿ ವಿಹರಿಸುತ್ತಿರುವ ವೇಂಕಟೇಶ! ನಿನಗೆ ಮಂಗಳವು.

**ಶ್ರೀ ಮತ್ಸುಂದರಜಾಮಾತೃಮುನಿಮಾನಸವಾಸಿನೇ ।**

**ಸರ್ವಲೋಕನಿವಾಸಾಯ ಶ್ರೀನಿವಾಸಾಯ ಮಂಗಳಮ್ ॥13 ॥**

ಸೌಮ್ಯ ಜಾಮಾತೃಯೋಗಿಗಳ ಮನೋನಿವಾಸಿಯಾಗಿದ್ದರೂ ಸರ್ವಲೋಕ ನಿವಾಸಿಯಾದ ಶ್ರೀನಿವಾಸ! ನಿನಗೆ ಮಂಗಳವು.

**ಮಂಗಳಾಶಾಸನಪರೈರ್ಮದಾಚಾರ್ಯಪುರೋಗಮೈಃ ।**

**ಸರ್ವೈಶ್ಚಪೂರ್ವೈರಾಚಾರ್ಯೈಃ ಸತ್ಕೃತಾಯಾಸ್ತು ಮಂಗಳಮ್ ॥14 ॥**

ಮಂಗಳಶಾಸನ ಪರರಾದ ನಮ್ಮ ಆಚಾರ್ಯರೇ ಮೊದಲಾದ ಹಿಂದಿನ ಎಲ್ಲ ಆಚಾರ್ಯರಿಂದಲೂ ಸತ್ಕರಿಸಲ್ಪಟ್ಟ ವೇಂಕಟೇಶ! ನಿನಗೆ ಮಂಗಳವು.

